ಶ್ರೀ ವಾಟಾಳ್ ನಾಗರಾಜ್ : ನಮಗೆ ಭಯವಾಗಿತ್ತು. ಶಂಕರಮೂರ್ತಿಯವರು ಆಸ್ಪತ್ರೆಯಲ್ಲಿದ್ದರು, ಮತ್ತೊಬ್ಬರು ಶಂಕರಮೂರ್ತಿಯವರು ಇಲ್ಲಿ ಬಂದರೆ ನಮ್ಮ ಗತಿಯೇನು ಅಂತ.

ಶ್ರೀ ಎಸ್.ಎಸ್. ಪಾಟೀಲ್ : ಆ ಭಾಗಗಳಲ್ಲಿ ಒಂದು ಹೈಟೆಕ್ ಆಸ್ಪತ್ರೆಗಳಿಲ್ಲ. ದಯವಿಟ್ಟು ತಾವು ಇದಕ್ಕೆ ಉತ್ತರ ಕೊಡಬೇಕು.

ಉಪಾಧ್ಯಕ್ಷರು : ಜಗದೀಶ್‌ಶೆಟ್ಟರ್‌ರವರೇ, ತಾವು ಇದರಲ್ಲಿ ಸ್ವಲ್ಪ ಇಂಟರ್‌ಫಿಯರ್ ಆಗಿ. ಅವರು ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಒಂದು ಹೈಟೆಕ್ ಹೃದ್ರೋಗದ ಆಸ್ಪತ್ರೆಗೆ ಬಗ್ಗೆ ಕೇಳುತ್ತಾರೆ ನೋಡಿ.

ಶ್ರೀ ಜಗದೀಶ್ ಶೆಟ್ಟರ್ : ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಸಚಿವರಿದ್ದಾರೆ, ಮೆಡಿಕಲ್ ಎಜ್ಯುಕೇಷನ್ ಸಚಿವರು ಇದ್ದಾರೆ, ಮಾನ್ಯ ಅಶೋಕ್‌ರವರು ಅದನ್ನೇ ಹೇಳುತ್ತಿದ್ದಾರೆ, ಸಂಬಂಧಪಟ್ಟ ಸಚಿವರೊಂದಿಗೆ ಮಾತನಾಡಿ ಇದಕ್ಕೆ ಸರ್ಕಾರದಿಂದ ಸ್ಪಷ್ಟವಾದ ಉತ್ತರವನ್ನು ಕೊಡಿಸುತ್ತೇನೆಂದು ಹೇಳುತ್ತಿದ್ದಾರೆ, ಸದನ ಇನ್ನೂ ನಾಲ್ಕೂ ದಿವಸ ಮುಂದಕ್ಕೆ ಹಾಕಿದ್ದಾರೆ, ಹುಬ್ಬಳ್ಳಿಯ ಭಾಗದಲ್ಲಿ ಅಭಿವೃದ್ಧಿಯ ದೃಷ್ಟಿಯಿಂದ ಆಸ್ಪತ್ರೆಯ ಅವಶ್ಯಕತೆಯಿದೆಯೆಂಬುದನ್ನು ನಾನು ಒಪ್ಪುತ್ತೇನೆ. ಇದಕ್ಕೆ ನಾನು ಒತ್ತಾಯ ಮಾಡುತ್ತೇನೆ. ಆಯಿತು, ಅವರ ಕಡೆಯಿಂದ ಉತ್ತರವನ್ನು ತೆಗೆದುಕೊಳ್ಳೋಣ.

ಉಪಾಧ್ಯಕ್ಷರು : ನೀವು ಸ್ವಲ್ಪ ಪ್ರಯತ್ನ ಮಾಡಿ.

ಬೆಂಗಳೂರಿನಲ್ಲಿ ಕೆಲಸದ ವೇಳೆಯಲ್ಲಿ ಅಪಘಾತಕ್ಕೊಳಗಾದ ದಿನಗೂಲಿ ಕಾರ್ಮಿಕ ಬಗ್ಗೆ.

322(1229) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತರೆ ಜಿಲ್ಲೆಗಳಿಂದ ಅದರಲ್ಲೂ ಉತ್ತರ ಕನ್ನಡ ಜಿಲ್ಲೆಯಿಂದ ಬೆಂಗಳೂರಿಗೆ ಬಂದ ಕಟ್ಟಡ ಕೆಲಸಗಾರರು ಕೆಲಸದ ಸಮಯದಲ್ಲಿ ಅಪಘಾತಕ್ಕೊಳಗಾಗಿ ಮೃತ ಪಟ್ಟಿದ್ದು ಹಾಗೂ ಗಾಯ ಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ದಿನಗೂಲಿ ನೌಕರರ ಭದ್ರತೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಇ) ಇಲ್ಲದಿದ್ದಲ್ಲಿ, ಈ ನೌಕರರಿಗೆ ಕಂಪನಿ ಗುತ್ತಿಗೆದಾರರ ಸಹಾಯದೊಂದಿಗೆ ವಿಮಾ ಸೌಲಭ್ಯವನ್ನು ಕಲ್ಪಿಸುವ ಪ್ರಸ್ತಾವನೆ ಸರ್ಕಾರದಲ್ಲಿದೆಯೇ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು):

ಅ) ಬಂದಿದೆ.

ಅ) ಅಪಘಾತಕ್ಕೊಳಗಾಗಿ ಮೃತಪಟ್ಟ ಅಥವಾ ಖಾಯಂ ಆಗಿ ಗಾಯ ಗೊಂಡ ಕಾರ್ಮಿಕರಿಗೆ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ, 1923ರ ಅಡಿಯಲ್ಲಿ ವಯಸ್ಸು ಮತ್ತು ವೇತನದ ಆಧಾರದ ಮೇಲೆ ಪರಿಹಾರವನ್ನು ಕೊಡಿಸಲಾಗುತ್ತದೆ.

ಇ) ರಾಜ್ಯ ಸರ್ಕಾರದವು ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ (ನಿಯಂತ್ರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮಗಳು, 2006ರಡಿಯಲ್ಲಿ ಕರಡು ನಿಯಮಗಳನ್ನು ರೂಪಿಸಲಾಗುತ್ತಿದ್ದು, ರೂ. 1 ಲಕ್ಷ ಪರಿಹಾರ ಧನವನ್ನು ಅಪಘಾತದಲ್ಲಿ ಮರಣ/ಖಾಯಂಗಾಯಗೊಂಡ ಫಲಾನುಭವಿಗಳಿಗೆ ನೀಡಲು ಪ್ರಾವಧಾನವನ್ನು ಕಲ್ಪಿಸಲಾಗುತ್ತಿದೆ. ಸಾರ್ವಜನಿಕರ ಗಮನಕ್ಕೆ ಈ ಕರಡು ನಿಯಮಗಳನ್ನು ತಂದು, ಅವರಿಂದ ಆಕ್ಷೇಪಣೆ ಹಾಗೂ ಸಲಹೆಗಳನ್ನು ಕೋರಲು ಇನ್ನು ಒಂದು ವಾರದ ಒಳಗಾಗಿ ಅಧಿಸೂಚನೆಯನ್ನು ಹೊರಡಿಸಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 322 (1229)
(ಉತ್ತರದ ಪ್ರತಿ ಲಗತ್ತಿಸಿದೆ)

ಶ್ರೀ ಐವಾನ್ ನಿಗ್ಲಿ : ಮಾನ್ಯ ಅಧ್ಯಕ್ಷರೇ, My question was whether the Government is aware that, the construction workers who come to Bangalore from other districts of the State especially from North Karnataka suffer injuries and some resulting in death also. ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. In case of accident yes ಎಂದು ಕೊಟ್ಟಿದ್ದಾರೆ. ನಂತರ in case of accident resulting in injury or death compensation 1923 ಆಕ್ಟ್ ಪ್ರಕಾರ compensation ಕೊಡುತ್ತೇನೆಂದು ಹೇಳಿದ್ದಾರೆ. Compensation ಹೇಗೆ ಕೊಡುತ್ತಾರೆಂದರೆ depends upon the age and weight. ಅಂದರೆ ಅವರು ಸತ್ತ ಮೇಲೆ ಅವರ ಏಜ್ ಪ್ರಕಾರ ದುಡ್ಡು ಕೊಡುತ್ತಾರೆಯೇ? ಮಕ್ಕಳಿಗೆ 50,000/– ಇಲ್ಲವೇ ದೊಡ್ಡವರಿಗೆ 1.00 ಲಕ್ಷ ರೂ.ಗಳನ್ನು ಕೊಡುತ್ತಾರೆಯೇ ಎಂಬುದು ನನ್ನ ಮೊದಲ ಪ್ರಶ್ನೆ, ಎರಡನೇಯದಾಗಿ ಈ ಪರಿಹಾರಧನವನ್ನು ಸರ್ಕಾರದಿಂದ ಕೊಡುತ್ತಾರೆಯೇ? Insurance Agencyಯಿಂದ ಕೊಡುತ್ತಾರೆಯೇ? ಕಂಟ್ರಾಕ್ಟರ್ಸ್ ಮೂಲಕ ಕೊಡುತ್ತಾರೆಯೇ ಎಂದು ಹೇಳಬೇಕು. ಮೂರನೆಯದು ಇತ್ತೀಚಿನ ದಿನಗಳಲ್ಲಿ ಬೆಳಿಗ್ಗೆ ನ್ಯೂಸ್ ಪೇಪರ್ ಓದುತ್ತಿದ್ದರೆ ದಿನವೂ ಒಂದೆರಡು ಆಕ್ಸಿಡೆಂಟ್. ಇದನ್ನು ನೋಡಿ ನನಗೆ ಬೇಜಾರಾಯಿತು. ಅದಕ್ಕೆ ಕಮಿಷನರ್ ಆಫೀಸ್‌ಗೆ ಹೋಗಿ ಒಂದು ಲೆಟರನ್ನು ಕೊಟ್ಟು ಮಾಹಿತಿಯನ್ನು ತರಿಸಿದ್ದೇನೆ. ಜನವರಿ 10ನೇ ತಾರೀಕು

ರಿಪೋರ್ಟ್ ಕೊಟ್ಟಿದ್ದಾರೆ. ಜನವರಿ 2006 ರಿಂದ ಇವತ್ತಿನವರೆಗೆ ಅಂದರೆ 10ನೇ ತಾರೀಕಿನವರೆಗೆ 43 ಆಕ್ಸಿಡೆಂಟ್ ಆಗಿದೆ accident means number of accidents occured while working in the construction sites from January 2006. 43 accident ಆಗಿದೆ. ಬೆಂಗಳೂರು ಸಿಟಿಯಲ್ಲಿ ಸತ್ತುಹೋಗಿರುವವರು 45 ಜನ ಮತ್ತೆ ಇಂಜೂರ್ಡ್ ಆಗಿರುವವರು 15 ಜನ, ಇದರಲ್ಲಿ 39 ಕೇಸ್ ಬುಕ್ ಆಗಿದೆ. ಈ ಕೇಸ್ ಬುಕ್ ಮಾಡಿದ ಮೇಲೆ ಎಷ್ಟು ವರ್ಷವಾಗುತ್ತದೆ? ಕೆಲವು ಕೇಸುಗಳು ಎರಡು, ಮೂರು ವರ್ಷವಾಗಬಹುದು. ಆಕ್ಸಿಡೆಂಟ್ ಆದಮೇಲೆ ಅವರ ತಂದೆ ತಾಯಿಗೆ ಅಥವಾ ಅವರ ಮಕ್ಕಳಿಗೆ ಸರ್ಕಾರ ತಕ್ಷಣ ಏನಾದರೂ ಪರಿಹಾರವನ್ನು ನೀಡಬೇಕು. ಮತ್ತೆ ಇದಕ್ಕೋಸ್ಕರ ಸೆಪರೇಟ್ ಆಗಿ ಪ್ರಶ್ನೆ ಇದೆ. in my question if no, whether the Government has taken any proposal to provide a Group Insurance with the help of the company/ contractors to these labourers? ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. "The Government of Karnataka is intending to bring the building and other construction work regularization of employment and conditions of Service Rules, 2006." I think they have made a new Rule in 2006 in which a provision is made for providing Rupees one lakh as compensation to the beneficiaries in case of death or permanent... ಈಗ ಈ ಒಂದು ಲಕ್ಷ ರೂಪಾಯಿಯಲ್ಲಿ ಮರಣ ಹೊಂದಿರುವ ಈ 43 ಜನರಿಗೆ ಸರ್ಕಾರ ಒಂದು ಲಕ್ಷ ರೂ.ಗಳನ್ನು ಕೊಡುತ್ತದೆಯೇ ಇಲ್ಲವೇ ಎಂಬುದನ್ನು ಹೇಳಬೇಕು.

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಸಚಿವರು) : ಮಾನ್ಯ ಸದಸ್ಯರು ಮೊಟ್ಟ ಮೊದಲನೆಯದಾಗಿ ಅವರು ಕೇಳಿದ ಪ್ರಶ್ನೆಗೆ ಬೆಂಗಳೂರು ಹೊರತುಪಡಿಸಿ ಉತ್ತರ ಕರ್ನಾಟಕದಿಂದ ಯಾರಾದರೂ ಕಟ್ಟಡ ಕಾರ್ಮಿಕರ ನಿಧನ ಹೊಂದಿರುವ ಬಗ್ಗೆ ಕೇಸಸ್ ಎಷ್ಟು ಎಂದು ಹೇಳಿದ್ದಾರೆ, ಅದಕ್ಕೆ ಸಂಪೂರ್ಣ ಮಾಹಿತಿಯನ್ನು ಕೊಟ್ಟಿದ್ದೇವೆ. ಉತ್ತರ ಕರ್ನಾಟಕದ ಭಾಗದಿಂದ 19 ಮರಣ ಹೊಂದಿರುವ ಪ್ರಕರಣಗಳು ಹಾಗೂ disabled ಆಗಿರುವ ಪ್ರಕರಣಗಳು ದಾಖಲಾಗಿವೆ. ಅದರಲ್ಲಿ 9 ಪ್ರಕರಣಗಳಲ್ಲಿ ಈಗಾಗಲೇ ಪರಿಹಾರಧನವಾಗಿ 21,72,879–00, ಅದರಲ್ಲಿ ಒಂದು ಗಾಯಗೊಂಡ ಪ್ರಕರಣವಾಗಿದ್ದು, ಅದಕ್ಕೆ 44,987–00 ರೂ.ಗಳನ್ನು ನೀಡಲಿಕ್ಕೆ ಆದೇಶವಾಗಿದೆ. ಇನ್ನೂ 9 ಪ್ರಕರಣಗಳು

ಇತ್ಯರ್ಥವಾಗಬೇಕಾಗಿದೆ. ಎರಡನೆಯದಾಗಿ ಇವತ್ತು ಬೆಳಿಗ್ಗೆ Commissioner of Labour Departmentನಿಂದ ಅವರು ಪಡೆದಿರುವ ಮಾಹಿತಿಯನ್ವಯ 32 ಪ್ರಕರಣಗಳು ದಾಖಲಾಗಿವೆ, ಅದು ಯಾವಾಗ ಇತ್ಯರ್ಥವಾಗುತ್ತದೆ ಎಂದು ಕೇಳಿದ್ದಾರೆ. ಬಹುಶಃ normally it takes one year. With in one year it will be settled. First point. The second one generally who will pay this? Insurance Company or Government? ಎಂದು ಕೇಳಿದ್ದಾರೆ. Employer will pay this compensation. ಯಾರು ಕೆಲಸಕ್ಕೆ ಇಟ್ಟುಕೊಂಡಿದ್ದರು ಅವರಿಂದ ನಮ್ಮ Labour Department will act as a enforcement. ಎನ್‌ಫೋರ್ಸ್ ಮಾಡುವುದಕ್ಕೆ ನಾವು ಆಕ್ಟ್ ಮಾಡುತ್ತೇವೆ. As per the 1923 Labour Act. ಅದರ ಪ್ರಕಾರ ನಮ್ಮಲ್ಲಿ ದಾಖಲೆಯಾದ ನಂತರ ಅವರನ್ನು ಯಾರು ಕೆಲಸಕ್ಕೆ ಇಟ್ಟುಕೊಂಡಿದ್ದರೂ ಅವರಿಂದ ಪರಿಹಾರಧನವನ್ನು ನಾವು ಕೊಡಿಸುತ್ತೇವೆ. ಮೂರನೆಯದಾಗಿ ಈ ಕಟ್ಟಡ ಕಾರ್ಮಿಕರಿಗೆ ಬಹಳ ವರ್ಷಗಳಿಂದ ಬೇಡಿಕೆ ಇತ್ತು. ವೆಲ್‌ಫೇರ್ ಬೋರ್ಡ್ ರಚನೆ ಮಾಡಬೇಕು. ಅಂತ ಹಾಗೆ ಆ ವೆಲ್‌ಫೇರ್ ಬೋರ್ಡಿನ ಅಡಿಯಲ್ಲಿ ನಾವು ಈ ಯೋಜನೆಯನ್ನು ಕೊಟ್ಟಿದ್ದೇವೆ. ಅದರ ಬಗ್ಗೆ 10–15 ದಿವಸಗಳಲ್ಲಿ ನೋಟಿಫಿಕೇಷನ್ ಜಾರಿಯಾಗುತ್ತದೆ, ಆದಾದ ನಂತರ ಎರಡು ತಿಂಗಳ ಅವಧಿಯಲ್ಲಿ ಪಬ್ಲಿಕ್‌ನಿಂದ ಆಬ್ಜೆಕ್ಷನ್ಸ್ ಕಾಲ್‌ಫರ್ ಮಾಡಿಸಿದ ನಂತರ ಅದು ಇಂಪ್ಲಿಮೆಂಟೇಷನ್ ಆಗುತ್ತದೆ. ನಂತರ G.O issue ಆಗುತ್ತದೆ. Namely, ಒಂದೆರಡು ಉದಾಹರಣೆಗಳನ್ನು ಹೇಳುತ್ತೇನೆ. ಆ welfare Boardನಲ್ಲಿ ನಾವು ನಮೂದಿಸಿದ ಪ್ರಕಾರ pension benefit ಒಂದು ತಿಂಗಳಿಗೆ 150–00 ರೂ.ಗಳನ್ನು ಅವರಿಗೆ 60 ವರ್ಷಗಳಾದ ನಂತರ ಕೊಡಲಾಗುವುದು, ಅದು ಪ್ರತಿ 5 ವರ್ಷಗಳಿಗೆ ರೂ. 10/– ಹೆಚ್ಚಾಗುತ್ತದೆ. ಆ disability pension benefit ರೂ. 150/– ಅನ್ನು ನಾವು ಕೊಡುತ್ತೇವೆ. Loans for purchase of equipments ಇದರ ಅಡಿಯಲ್ಲಿ ಈ ಕಟ್ಟಡ ಕಾರ್ಮಿಕರಿಗೆ ತಮ್ಮ ಸಾಮಾನು ಖರೀದಿಸಲಿಕ್ಕೆ 5,000–00 ರೂ.ಗಳನ್ನು ಕೊಡುತ್ತಿದ್ದೇವೆ. ಆ ಬೋರ್ಡಿನಲ್ಲಿ ಇದನ್ನು ನಮೂದಿಸಲಾಗಿದೆ. ಇನ್ನು assistance in case of accidents ಎಂದು ಅದರಲ್ಲಿ ಮ್ಯಾಕ್ಸಿಮಮ್ 5,000–00 ರೂ.ಗಳನ್ನು small injuriesಗೆ ಕೊಡುತ್ತಿದ್ದೇವೆ. ಏಕೆಂದರೆ ಮರಣ ಹೊಂದಿದರೆ 1923 ಆಕ್ಟ್ ಪ್ರಕಾರ 1.00 ಲಕ್ಷ ರೂ.ಗಳನ್ನು ಕೊಡುತ್ತೇವೆ. Other than

that, this welfare Board will act. ಮೂರನೆಯದು Loan for construction of House, ಈ ವರ್ಕರ್ಸ್‌ಗೆ 50,000–00 ರೂ.ಗಳವರೆಗೆ ಸಾಲವಾಗಿ ಈ ಬೋರ್ಡ್‌ನಿಂದ ಕೊಡಲಾಗುತ್ತದೆ. Maternity benefit for women, ಮಹಿಳಾ ಕಾರ್ಮಿಕರಿಗೆ ಅವರಿಗೆ 4,000–00 ರೂ.ಗಳನ್ನು ಹೆರಿಗೆ ಭತ್ಯೆಯೆಂದು ಎರಡು ಮಕ್ಕಳವರೆಗೆ ಮಾತ್ರ ಕೊಡಲಾಗುತ್ತದೆ. ಎರಡಕ್ಕಿಂತ ಹೆಚ್ಚು ಮಕ್ಕಳಿಗೆ ಈ ಭತ್ಯೆಯನ್ನು ಕೊಡುವುದಿಲ್ಲ. Assistance for marriage of their children. ಅವರ ಮಕ್ಕಳಿಗೋಸ್ಕರ 3,000–00 ರೂ.ಗಳನ್ನು ಕೇವಲ ಎರಡು ಮಕ್ಕಳಿಗೆ ಮಾತ್ರ ಕೊಡುತ್ತೇವೆ. Medical assistance ಅನ್ನು ಅವರ ಫ್ಯಾಮಿಲಿಗೆ ಕೊಡುತ್ತೇವೆ. ಮೇಜರ್ ಇದ್ದರೆ 10,000–00 ರೂಪಾಯಿಗಳವರೆಗೆ ಕೊಡುತ್ತೇವೆ. Funeral benefit ಗೆ 2,000–00 ರೂ.ಗಳನ್ನು ಕೊಡುತ್ತೇವೆ. ಈ welfare Act ಬಹುಶಃ ಅಕ್ಟೋಬರ್ ಅಂತ್ಯಕ್ಕೆ ಅಥವಾ ನವೆಂಬರ್ ಫಸ್ಟ್‌ಗೆ ಆಗಬಹುದು ಎಂದು ಮಾನ್ಯ ಸದಸ್ಯರಿಗೆ ನಾನು ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಏನು ಕೆಲವೊಂದು ಸೌಲಭ್ಯಗಳನ್ನು ಈ ಕಟ್ಟಡ ಕಾರ್ಮಿಕರಿಗೆ ಕೊಡುತ್ತೇವೆಂದು ಹೇಳಿದರು, ಬಹಳ ಸಂತೋಷ. ಆದರೆ, ಇಲ್ಲಿ ಏನಾಗಬೇಕಾಗಿದೆ, ಬೆಂಗಳೂರಿನಲ್ಲಿ ಏನು ಕಟ್ಟಡ ಕಾರ್ಮಿಕರು ಇದ್ದಾರೆ, ಅವರುಗಳು ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಗುಲ್ಬರ್ಗಾ, ರಾಯಚೂರು ಮತ್ತು ಕೊಪ್ಪಳ ಪ್ರದೇಶಗಳಿಂದ ಬಂದಿರಬಹುದು. ಬೆಂಗಳೂರಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ಹೈರೈಸ್ಸೆಸ್ ಬಿಲ್ಡಿಂಗ್‌ಗಳನ್ನು ಕಟ್ಟುತ್ತಿದ್ದಾರೆ. ಯಾವುದೇ ಬಿಲ್ಡಿಂಗ್ ಕೂಡ ಕನಿಷ್ಠ 10 ಫ್ಲೋರ್‌ಗಳಿಗಿಂತ ಕಡಿಮೆ ಕಟ್ಟುವುದಿಲ್ಲ. ಎಲ್ಲವೂ ಕೂಡ ಹೈರೆಸ್ಸೆ ಬಿಲ್ಡಿಂಗ್ಸ್. ಹೈರೈಸ್ ಬಿಲ್ಡಿಂಗ್‌ಗಳಲ್ಲಿ ಅಪಘಾತ ಆಗುವುದು ಸಹಜ. ಅದಕ್ಕೆ ಕಾರ್ಮಿಕ ಇಲಾಖೆಯಿಂದ ಸ್ಪಷ್ಟವಾಗಿ ಕಾನೂನು ಮಾಡಬೇಕಾಗುತ್ತದೆ. ಯಾರು ಯಾರು ಹೈರೆಸ್ಸೆ ಬಿಲ್ಡಿಂಗ್‌ನಲ್ಲಿ ಕಾರ್ಮಿಕರು ಕೆಲಸ ಮಾಡುತ್ತಾರೆ, ಆ ಕಂಪನಿಯವರು ಅವರ ಪರವಾಗಿ ಇನ್‌ಷೂರೆನ್ಸ್ ಮಾಡಲೇಬೇಕು. ಇದು ಕಡ್ಡಾಯ. ಇಲ್ಲದೇ ಇದ್ದರೆ ಅವರಿಗೆ ಬಹಳ ಅನ್ಯಾಯವಾಗುತ್ತದೆ. ಮತ್ತು ಕಂಪನಿಯಿಂದ ಬೆನಿಫಿಟ್ ಕೊಡಬೇಕು. ಒಬ್ಬ ಕಾರ್ಮಿಕ ಬಿದ್ದು ಸತ್ತು ಹೋಗಿಬಿಟ್ಟರೆ, ಅವನಿಗೆ ಕಂಪನಿಯಿಂದ ಹಣವನ್ನೂ ಕೊಡವುದಿಲ್ಲ ಮತ್ತು ಇನ್‌ಷೂರೆನ್ಸ್ ಕೂಡ ಬರುವುದಿಲ್ಲ. ಅದಕ್ಕೆ, ಆ ಕಂಪನಿಯಿಂದ ಕಡ್ಡಾಯವಾಗಿ ಇಷ್ಟು ಹಣ ಎಂದು ನಿಗದಿಗೊಳಿಸಬೇಕು ಮತ್ತು ಅದರ ಜೊತೆಗೆ ಅವರ ಮೇಲೆ

ಇನ್‌ಷೂರೆನ್ಸ್‌ನ್ನೂ ಮಾಡಬೇಕು. ಆ ತರಹದ ಕಡ್ಡಾಯವಾದಂಥ ಕಾನೂನನ್ನು ಸರ್ಕಾರ ಮಾಡುತ್ತದೆಯೇ ಹೇಗೆ?

ಶ್ರೀ ಐವಾನ್ ನಿಗ್ಲಿ : ಮಾನ್ಯ ರಾಯರೆಡ್ಡಿಯವರು ಕೊಟ್ಟಿರುವುದು ಒಳ್ಳೆಯ ಸಲಹೆ. ಆದರೆ, ನಾನು ಕೇಳಿದ ಪ್ರಶ್ನೆಗೆ ಉತ್ತರ ಬರಲಿಲ್ಲ. ಇತ್ತೀಚೆಗೆ 45 ಜನ ತೀರಿ ಹೋಗಿಬಿಟ್ಟಿರಲ್ಲಾ, ಅವರಿಗೆ ಸರ್ಕಾರದ ಪರವಾಗಿ ತಕ್ಷಣ ಏನಾದರೂ ಪರಿಹಾರ ಕೊಡುತ್ತಾರೋ ಇಲ್ಲವೋ?

ಶ್ರೀ ಇಕ್ಬಾಲ್ ಅನ್ಸಾರಿ : ಹಿರಿಯ ಸದಸ್ಯರಾದಂಥ ಮಾನ್ಯ ರಾಯರೆಡ್ಡಿಯವರು ಹೇಳಿದರು, ಹೈರೈಸ್ ಬಿಲ್ಡಿಂಗ್‌ಗಳು ಬೆಂಗಳೂರಿನಲ್ಲಿ ಬಹಳಷ್ಟು ಆಗುತ್ತಿವೆ. ಇದರಲ್ಲಿ ಅಪಘಾತಗಳು ಆಗುವುದು ಸಹಜ . ಏಕೆಂದರೆ, ಬಹಳ ಹೈರೈಸ್ ಬಿಲ್ಡಿಂಗ್‌ಗಳ ಕನ್‌ಸ್ಟ್ರಕ್ಷನ್ ಆಗುತ್ತವೆ. ಅದರಲ್ಲಿ, as per the Labour Act ಪ್ರಕಾರ, 1923 ಈಗಾಗಲೇ ನಾನು ಹೇಳಿದೆ. ಒಂದು ಲಕ್ಷ ರೂಪಾಯಿಗಳನ್ನು ಮರಣ ಹೊಂದಿದವರಿಗೆ ಕೊಡುತ್ತೇವೆ. ಅದು ಸರ್ಕಾರದಿಂದ ಅಲ್ಲ. ಕಾರ್ಮಿಕರನ್ನು ಯಾರು ಕೆಲಸಕ್ಕೆ ಇಟ್ಟುಕೊಳ್ಳುತ್ತಾರೋ ಅವರ ಕಡೆಯಿಂದ ನಾವು ಕೊಡಿಸುತ್ತಾ ಇದ್ದೇವೆ. ಇನ್ನು Employers ಮೇಲೆ ಮಾಡಬೇಕೆನ್ನುವುದರ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ. ಮತ್ತು ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಎರಡನೆಯದಾಗಿ ನಮ್ಮ ಐವಾನ್ ನಿಗ್ಲಿಯವರು ಹೇಳಿದರು. ಕೆಲವೊಂದು ಕೇಸಸ್‌ಗಳೇನು ಬುಕ್ ಆಗಿವೆ, ಅದಕ್ಕೆ ಸರ್ಕಾರ ಪರಿಹಾರ ಕೊಡುತ್ತದೆಯೇ ಎಂದು ಕೇಳಿದರು. ನಾನು ಈಗಾಗಲೇ ನಮ್ಮ ಮಾನ್ಯ ಸದಸ್ಯರಿಗೆ ಹೇಳಿದೆ. ಲೇಬರ್ ಡಿಪಾರ್ಟ್‌ಮೆಂಟ್ ಇದು ಎನ್‌ಫೋರ್ಸ್‌ಮೆಂಟ್ ಡಿಪಾರ್ಟ್‌ಮೆಂಟ್. ನಮ್ಮ ಸರ್ಕಾರದ ಕಡೆಯಿಂದ ಅದು ಕೊಡುವುದಿಲ್ಲ. ಯಾರು ಎಂಪ್ಲಾಯರ್ ಅವರನ್ನು ಕೆಲಸಕ್ಕೆ ಇಟ್ಟುಕೊಂಡಿದ್ದಾರೆ, ಈ ಅಕ್ಟ್‌ನಲ್ಲಿ ಅವರಿಗೆ ಏನೇನು ಪರಿಹಾರ ಕೊಡಬೇಕೆಂದು ಹೇಳಿದೆ, ಅದನ್ನೂ ಕೊಡಿಸುವಂಥ ಕೆಲಸ ಮಾಡುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ಪ್ರಮುಖವಾಗಿ ಒಂದು ಸಂಗತಿಯನ್ನು ಮಾನ್ಯ ಸಚಿವರು ಗಮನಿಸಬೇಕು. ಕೇವಲ ಕಟ್ಟಡ ಕಾರ್ಮಿಕರಿಗೆ ಸಂಬಂಧಪಟ್ಟಿದ್ದು ಮಾತ್ರ ಅಲ್ಲ. ಬಹುಶಃ Tailors Association ಎಂದು ಹೇಳುವಂಥ ಲಕ್ಷಾಂತರ ಮಂದಿ ಇರುವಂಥ ಕಾರ್ಮಿಕರು, ಈ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕೋಸ್ಕರ ಈ ಸರ್ಕಾರ ಒಂದು ಮಸೂದೆಯನ್ನು ತರಬೇಕೆಂದು ಕಳೆದ ವಿಧಾನ ಸಭೆಯಲ್ಲಿ ಒತ್ತಾಯ ಮಾಡಿದ್ದೆವು. ಹಾಗೂ ವಿಶೇಷವಾಗಿ ಈ ಪ್ರಸ್ತಾವನೆಯನ್ನು ಇಟ್ಟಿದ್ದೆ. ಮಾನ್ಯ ಸಚಿವರು ಈ ಅಸಂಘಟಿತ ಕಾರ್ಮಿಕರಿಗೋಸ್ಕರ,

ಎಲ್ಲಾ ವ್ಯಾಪ್ತಿಯಿಂದ ಬರುವ ರೀತಿಯಲ್ಲಿ, ಅವರಿಗೆ ಇನ್‌ಷೂರೆನ್ಸ್ ಬರಬೇಕು ನಂತರ ಬೇರೆ ತರಹದ ವಿಮಾ ಸೌಲಭ್ಯಗಳೂ ಸಿಗಬೇಕು ಮತ್ತು ರಕ್ಷಣೆಯೂ ಸಿಗಬೇಕು. ಪೆನ್‌ಷನ್ ಮತ್ತು ಕ್ಷೇಮನಿಧಿ ಬರಬೇಕು. ಈ ನಿಟ್ಟಿನಲ್ಲಿ ಕೂಡ ತಾವು ಯೋಚನೆ ಮಾಡುತ್ತೀರಾ ಮತ್ತು ಇದನ್ನು ಅನುಷ್ಠಾನಕ್ಕೆ ತರುತ್ತೀರಾ ಎಂಬ ವಿನಂತಿಯನ್ನು ಮಾಡುತ್ತಿದ್ದೇನೆ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಈಗಾಗಲೇ ಮಾನ್ಯ ಮಂತ್ರಿಗಳು ನಿರ್ದಿಷ್ಟವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ಹೊಸ ಕಾನೂನು ಕೂಡ ತರಬೇಕಾಗಿದೆ, ಹಿಂದೆ ಇರತಕ್ಕಂಥಾದ್ದರಲ್ಲಿ 1923 ಆಕ್ಟ್ ಪ್ರಕಾರ ಒಂದು ಲಕ್ಷ ರೂ ಕೊಡಬೇಕೆಂದು ಹೇಳುತ್ತಾ ಇದ್ದೀರಿ. ಆದರೆ, ಈಗೇನು ಪ್ರಕರಣಗಳಾಗುತ್ತಾ ಇವೆ, ಏನು ಮರಣಗಳು ಆಗುತ್ತಾ ಇವೆ, ಅವುಗಳ ಬಗ್ಗೆ ನಿಮ್ಮ ಇಲಾಖೆಯಲ್ಲಿ ಕಂಪ್ಲೇಂಟ್ ಕೊಡಬೇಕೇ ಅಥವಾ ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕೊಡಬೇಕೇ? ಪೋಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ, ಯಾವುದೇ ಒಬ್ಬ ವ್ಯಕ್ತಿ ಮರಣ ಹೊಂದಿದರೆ ಈ ವ್ಯಕ್ತಿ ಈ ರೀತಿ ಈ ಕೆಲಸ ಮಾಡುವಾಗ ಬಿದ್ದು ಸತ್ತ ಎಂದು ಇರುತ್ತದೆ. ಅದರೆ ಬಗ್ಗೆ ಸೂವೋಮೋಟೋ ನಿಮ್ಮ ಡಿಪಾರ್ಟ್‌ಮೆಂಟಿನವರು ಹೋಗುತ್ತಾರಾ? ಏಕೆಂದರೆ, ನನ್ನ ಕ್ಷೇತ್ರದಲ್ಲಿ ಹೋದವರ್ಷ ಒಬ್ಬ ಕಾರ್ಮಿಕ ಬಿದ್ದು ಮರಣ ಹೊಂದಿದ. ಆದರೆ, ಆ ಗುತ್ತಿಗೆದಾರ ಅವನ ಶವವನ್ನು ಅವನ ಗ್ರಾಮಕ್ಕೆ ಒಯ್ಯಲಿಕ್ಕೂ ಕೂಡ ಹಣವನ್ನು ಕೊಡಲಿಲ್ಲ. ಪೋಲೀಸ್ ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಇರತಕ್ಕಂಥಾದ್ದರ ಬಗ್ಗೆ ಕಾರ್ಮಿಕ ಇಲಾಖೆ ಪ್ರತಿ ತಿಂಗಳೂ ಈ ರೀತಿಯಾದ ಘಟನೆಗಳ ಬಗ್ಗೆ ಸುವೋಮೋಟೋ ಆಕ್ಷನ್ ತೆಗೆದುಕೊಳ್ಳುತ್ತೀರಾ? ಇದರ ಬಗ್ಗೆ ನೀವು ಸ್ಪಷ್ಟೀಕರಣ ಕೊಡಲಿಲ್ಲ. ಏಕೆಂದರೆ, ನಿಮ್ಮ ಹತ್ತಿರ ದೂರು ದಾಖಲಾದರೆ, ಅಂದರೆ ನಿಮ್ಮ ಇಲಾಖೆಗೆ ಬಂದು ದೂರು ದಾಖಲು ಮಾಡಬೇಕೆಂಬ ಪರಿಜ್ಞಾನ ಇವತ್ತು ಕಾರ್ಮಿಕರಿಗೆ ಇರುವುದಿಲ್ಲ. ಇದಕ್ಕೆ ಏನು ಮಾಡಬೇಕೆಂದು ಹೇಳುತ್ತೀರಿ ಮತ್ತು ನಿಮ್ಮ ಸ್ಪಷ್ಟವಾದ ನಿಲುವು ಏನು? ಇದು ಬಹಳ ಪ್ರಮುಖವಾಗಿರತಕ್ಕಂಥಾದ್ದು. ಏಕೆಂದರೆ, ನಮ್ಮ ಕಡೆಯಲ್ಲಿ ಈ ರೀತಿಯ ಬಹಳ ಜನರಿಗೆ ಪರಿಹಾರ ಸಿಕ್ಕಿಲ್ಲ.

ಶ್ರೀ ನೆ.ಲ. ನರೇಂದ್ರ ಬಾಬು : ಬೆಂಗಳೂರುನಗರದಲ್ಲಿ ವಿಶೇಷವಾಗಿ ಬಹಳಷ್ಟು ಕಟ್ಟಿಡದ ಕೆಲಸಗಳು ನಡೆಯುತ್ತಾ ಇವೆ. ಉದಾಹರಣೆಗೆ ನನ್ನ ಕ್ಷೇತ್ರ ವ್ಯಾಪ್ತಿಯಲ್ಲೇ ಎರಡು ಮೂರು ಘಟನೆಗಳು ನಡೆಯಿತು. 1990ನೇ ಇಸವಿಯಲ್ಲಿ ಸುಜಾತ ಮುಂದುಗಡೆ ಸೇತುವೆ ಕಟ್ಟಬೇಕಾದರೆ ಇಬ್ಬರು ಮೂರು ಜನ ಸತ್ತರು. ಐದು ಜನ ಗಾಯಾಳುಗಳಾದರು. ಬೆಂಗಳೂರು ಮಹಾನಗರ ಪಾಲಿಕೆಯಿಂದ ಕಟ್ಟುತ್ತಿದ್ದ

ಕಟ್ಟಡದಲ್ಲಿ, ಆ ಗುತ್ತಿಗೆದಾರರು ಯಾವುದೇ ಪರಿಹಾರ ಕೊಡಲಿಲ್ಲ. ಎರಡನೆಯದು, ಇತ್ತೀಚೆಗೆ ರಾಜಾಜಿನಗರದ ಕಾರ್ಡ್ ರಸ್ತೆ ಮತ್ತು ಮೋದಿ ರಸ್ತೆ ಗ್ರೇಡ್ ಸಪರೇಟರ್ ಕನ್‌ಸ್ಟ್ರಕ್ಷನ್ ಆಗಬೇಕಾದರೆ ಮಣ್ಣು ಕೊಲ್ಯಾಪ್ಸ್ ಆಗಿ, ಬಹುಶಃ ಉತ್ತರ ಕರ್ನಾಟಕದ ಇಬ್ಬರು ಕಾರ್ಮಿಕರು ಸತ್ತರು. ಅಗಲೂ, ಅದನ್ನು ಮರೆಮಾಚಿದರು. ನಾನು ರಿಕ್ವಸ್ಟ್ ಮಾಡಿಕೊಳ್ಳುವುದೇನೆಂದರೆ, ನಮ್ಮ ಡಾಕ್ಟರು ಹೇಳಿದಹಾಗೆ ದಯವಿಟ್ಟು ಈ ದೊಡ್ಡ ದೊಡ್ಡ ಕನ್‌ಸ್ಟ್ರಕ್ಷನ್ ಆಕ್ಟಿವಿಟಿ ಮಾಡತಕ್ಕಂಥ ಈ ಗುತ್ತಿಗೆದಾರರಿಗೆ ಒಂದು ನಿಬಂಧನೆ ಇದ್ದರೆ, ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಏಕೆಂದರೆ,ಕಿರ್ಲೋಸ್ಕರ್ ಫ್ಯಾಕ್ಟರಿ ಇದ್ದ ಜಾಗದಲ್ಲಿ ಈಗ ಸಾವಿರಾರು ಕಟ್ಟಡಗಳು ಬರುತ್ತಾ ಇವೆ. ಮುಂದೆ, ಈ ರೀತಿಯ ಕಟ್ಟಡಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ಅವರು ಅನಾಥರು, ಬಾಯಿ ಇಲ್ಲದೇ ಇರುವ ಜನ. ಅಸಂಘಟಿತ ಕಾರ್ಮಿಕರು, ವಿಶೇಷವಾಗಿ ಇಂತಹ ಕಾರ್ಮಿಕರು; ತಾವು ಅವರ ರಕ್ಷಣೆಗೆ ಬರಬೇಕು. ಇಲ್ಲವಾದರೆ, ದೊಡ್ಡದೊಡ್ಡ ಪ್ರಾಜೆಕ್ಟ್‌ಗಳಲ್ಲಿ ಎಷ್ಟು ಜನ ಸತ್ತರು, ಯಾರು ಸತ್ತರು ಎಂಬುದೇ ಗೊತ್ತಾಗುವುದಿಲ್ಲ. ಮಾನ್ಯ ನಿಗ್ಲಿಯವರು ಹೇಳಿದಹಾಗೆ, ಅವರಿಗೆ ಪರಿಹಾರ ಕೊಡಬೇಕು. ಒಂದು ವರ್ಷ ಅಂದರೆ, ಅವರ ಗತಿ ಏನಾಗಬೇಕು ಸ್ವಾಮಿ? ಸರ್ಕಾರದಿಂದ ತೀರ್ಮಾನವಾಗಿ ಬರುವಹೊತ್ತಿಗೆ, ಅವರ ಮನೆ ಮಠ, ನಂದಿದ ಕುಟುಂಬದ ಸ್ಥಿತಿ ಏನಾಗಬೇಕು? ದಯವಿಟ್ಟು ಇದರ ಬಗ್ಗೆ ಸರ್ಕಾರ ತುರ್ತಾಗಿ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಬೇಕು. ಕೇಸ್ ಬುಕ್ ಆಗುತ್ತದೆಯೋ ಇಲ್ಲವೋ, ಅಲ್ಲೇ ಮರೆಮಾಚಿಬಿಡುತ್ತಾರೆ, ಮುಚ್ಚಿಹಾಕುತ್ತಾರೆ, ಹೆಣ ಸಾಗಿಸಲಿಕ್ಕೂ ಕೂಡ ಅಲ್ಲೆಲ್ಲಾ ಜನ ಎದ್ದು ತಿರುಗಿನಿಂತುಕೊಂಡಾಗ, ಅವರು ಆಗ ಇ.ಸಿ.ಇ. ಕನ್‌ಸ್ಟ್ರಕ್ಷನ್ ಎಂದು ಕ್ರಮ ತೆಗೆದುಕೊಂಡರು. ಇದರ ಬಗ್ಗೆ ಎಚ್ಚರಿಕೆಯನ್ನು ವಹಿಸಲು, ತಾವು ಅಧಿಕಾರಿಗಳಿಗೆ ಹೇಳಬೇಕು.

ಶ್ರೀ ಇಕ್ಬಾಲ್ ಅನ್ಸಾರಿ : ಮಾನ್ಯ ಸ್ನೇಹಿತರಾದಂಥ ಡಾಕ್ಟರವರು ಇವತ್ತು ನೆ.ಲ. ನರೇಂದ್ರಬಾಬು ಬಹಳ ಸೂಕ್ತವಾದಂಥ ವಿಷಯವನ್ನು ಹೇಳಿದ್ದಾರೆ. ಕಾರ್ಮಿಕರಿಗೆ ಹೆಚ್ಚಾಗಿ ಇದರಲ್ಲಿ awareness ಇರುವುದಿಲ್ಲ. ಏನು ಮಾಡಬೇಕು, ಬೆನಿಫಿಟ್ ಯಾವರೀತಿ ತೆಗೆದುಕೊಳ್ಳಬೇಕು ಎಂದು ಸರ್ಕಾರ, ಇದರ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಸಾಕಷ್ಟುಸಾರಿ ಹಮ್ಮಿಕೊಂಡಿದ್ದೇವೆ. ಖಂಡಿತವಾಗಿ, ಡಾಕ್ಟರೇ ನಿಮಗೆ ಹೇಳುತ್ತಿದ್ದೇನೆ, the complaint should be filed before the Labour Department. ಲೇಬರ್ ಡಿಪಾರ್ಟ್‌ಮೆಂಟಿನಲ್ಲಿ ಕಂಪ್ಲೇಂಟ್ ಲಾಡ್ಜ್‌ಆದ ನಂತರವೇ, the Labour Department can enforce ಮಾಡಲಿಕ್ಕೆ ಮುಂದಾಗುತ್ತದೆ. as per the Act of the Labour Department ಏನೇನು

ಪರಿಹಾರ ಸಿಗಬೇಕಾಗುತ್ತದೆ, ಅದು ಕೊಡಿಸಲಿಕ್ಕೆ ನಾವು ಮುಂದಾಗುತ್ತೇವೆ. ಆದ್ದರಿಂದ, ಯಾರೇ ಆಗಲೀ ಇವತ್ತು ಐ.ಟಿ. ಕಂಪನಿಯಾಗಲೀ, ಬಿ.ಟಿ.ಕಂಪನಿಯಾಗಲೀ, ಯಾರೇ ಇರಲಿ, ಈ ಎಂಪ್ಲಾಯರ್ಸ್ ಏನಿದ್ದಾರೆ, they should register their company in the Labour Department. ಅದಾದ ನಂತರ, ಅದರಲ್ಲಿ ಎಷ್ಟು ಎಂಪ್ಲಾಯಿಗಳಿಗೆ ಕೆಲಸಕ್ಕೆ ತೆಗೆದುಕೊಳ್ಳುತಿದ್ದಾರೆ, ಅದಕ್ಕೂ ಸಹಿತ ಆಕ್ಟ್ ಇದೆ. ಅದರ ಪ್ರಕಾರ ಏನೇನು ಪರಿಹಾರ ಕೊಡಬೇಕು. ಅದೆಲ್ಲವನ್ನೂ ಕೊಡಿಸಬೇಕಾಗುತ್ತದೆ. ಎರಡನೆಯದಾಗಿ, ನಮ್ಮ ಸ್ನೇಹಿತರು ಹೇಳಿದರು. ಇದಲ್ಲದೆ, ಕೆಲವೊಂದು ಅನ್ ಆರ್ಗನೈಸ್ ಸೆಕ್ಟಾರ್‌ಗಳಲ್ಲಿ ಬಹಳಷ್ಟು ಜನರಿಗೆ ವೆಲಫೇರ್ ಸಿಗಬೇಕಾಗಿದೆ. ಅದು ಮಸೂದೆ ಬಂದಿತ್ತು. ಬಹುಶಃ ಮಾನ್ಯಸದಸ್ಯರಿಗೆ ಗೊತ್ತಿದೆ. 2002ನೇ ಇಸವಿಯಲ್ಲಿ ಮೇಲ್ಮನೆಯಲ್ಲಿ ಇದು ಚರ್ಚೆಗೆ ಬಂದಿತ್ತು. ಅಲ್ಲಿ ಚರ್ಚೆಗೆ ಅರ್ಧಕ್ಕೆ ನಿಂತಿದೆ. ಸರ್ಕಾರ ಚಿಂತನೆ ಮಾಡುತ್ತಾ ಇದೆ. ಬಹುಶಃ ಮುಂಬರುವ ಅಧಿವೇಶನಗಳಲ್ಲಿ, ಪುನಃ ಅದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇವೆ ಎಂಬುದನ್ನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ದೊಡ್ಡ ಬಳ್ಳಾಪುರದಲ್ಲಿ ಹಾಲಿ ಇರತಕ್ಕ ಆಸ್ಪತ್ರೆಯಲ್ಲಿ 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆ ಏರಿಸುವ ಬಗ್ಗೆ.

324(1097) ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ನಗರದಲ್ಲಿ ಈಗಾಗಲೇ 50 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆ ಇದ್ದು, ಪ್ರತಿ ದಿನ 700 ರಿಂದ 800 ಜನ ರೋಗಿಗಳು ಚಿಕಿತ್ಸೆಗೆ ಬರುತ್ತಿದ್ದು ಇದನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಈಗಾಗಲೇ ಹಲವಾರು ಬಾರಿ ಪ್ರಸ್ತಾವನೆಗಳನ್ನು ಸಲ್ಲಿಸಿದ್ದು ಈ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ.

ಆ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ:207 ಹಾದು ಹೋಗುತ್ತಿದ್ದು, ಕೈಗಾರಿಕಾ ವಸಾಹತು ಪ್ರದೇಶ ಮತ್ತು ಅಪರೆಲ್ ಪಾರ್ಕ್ ನಿರ್ಮಾಣವಾಗುತ್ತಿರುವುದರಿಂದ 100 ಹಾಸಿಗೆಗಳ ಆಸ್ಪತ್ರೆ ಅವಶ್ಯಕತೆ ಇರುವ ಪ್ರಯುಕ್ತ ಸರ್ಕಾರ ಮಂಜೂರಾತಿಯನ್ನು ಯಾವಾಗ ನೀಡುವುದು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಈ ಬಗ್ಗೆ ಪ್ರಸ್ತಾವನೆ ಬಂದಿದ್ದು, ನಿಯಮಾನುಸಾರ ಮತ್ತು ಅನುದಾನ ಲಭ್ಯತೆಗೆ ಅನುಗುಣವಾಗಿ ಪರಿಶೀಲಿಸಲಾಗುವುದು.